ಕುದುರೆಮುಖ ವನ್ಯಜೀವಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಥಳಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರ.

2211(2698) ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕುದುರೆಮುಖ ವನ್ಯಜೀವಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಥಳಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡುವಾಗ ಅದರಲ್ಲಿರುವ ಮನೆ, ಶಾಲೆ ಮತ್ತು ಕೃಷಿ ಇರುವ ಸ್ಥಳಗಳನ್ನು ಪರಿಶೀಲಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಅರಣ್ಯ ಇಲಾಖೆಯ (ರಕ್ಷಿತ ಅರಣ್ಯದ) ಸ್ವಾಧೀನದಲ್ಲಿರುವ ಭೂಮಿಯ ಬಗ್ಗೆ ನಕಾಶೆ ಇಲಾಖೆಯಲ್ಲಿ ಇದೆಯೇ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ಅಧಿಸೂಚನೆ ಸಂಖ್ಯೆ ಎಫ್‌ಇಇ 270 ಎಫ್ ಡಬ್ಲ್ಯೂಎಲ್ 99, ದಿನಾಂಕ 16-9-2001ರ ಪ್ರಕಾರ ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ರಕ್ಷಿತಾರಣ್ಯ ಪ್ರದೇಶಗಳಾದ ಅಂಡಾರ್, ದಕ್ಷಿಣ ಭದ್ರಾ, ತುಂಗಭದ್ರಾ, ನರಸಿಂಹ ಪರ್ವತ ಮತ್ತು ನಾರಾದಿಗಳನ್ನು ಒಳಗೊಂಡಿದ್ದು, ಇವು ಈಗಾಗಲೇ ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುತ್ತದೆ. ಮತ್ತು ಕಂದಾಯ ಜಮೀನು, ಪಟ್ಟಾ ಜಮೀನು, ಗೋಮಾಳ ಜಮೀನುಗಳನ್ನು ಇದರಲ್ಲಿ ಸೇರ್ಪಡೆಯಾಗಿರುವುದಿಲ್ಲ. ಆದ್ದರಿಂದ ಶಾಲೆ, ಮನೆ ಮತ್ತು ಕೃಷಿ ಇರುವ ಸ್ಥಳಗಳನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಬರುವ ರಕ್ಷಿತ ಪ್ರದೇಶಗಳ ಬಗ್ಗೆ ಅರಣ್ಯ ಇಲಾಖೆಯಲ್ಲಿ ನಕಾಶೆ ಇರುತ್ತದೆ.

ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಹಾಗೂ ರಾಜ್ಯದಲ್ಲಿ ಹದಗೆಟ್ಟಿರುವ ರಸ್ತೆಗಳು.

2213(1864) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿರುವ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. 1999-2000 ನೇ ಸಾಲಿನಲ್ಲಿ ದುರಸ್ತಿಗೊಳಿಸಲಾದ ರಸ್ತೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

3. ರಾಜ್ಯದಲ್ಲಿ ನಿರ್ಮಿಸಲಾಗಿರುವ ಹೊಸ ರಸ್ತೆಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ಇದರ ಬಾಳಿಕೆಯ ಅವಧಿ ಎಷ್ಟು;

4. ಇಲಾಖೆ ನಿಗಧಿಪಡಿಸಿದ ಅವಧಿಗಿಂತ ಮೊದಲೇ ರಸ್ತೆಗಳು ಹದಗೆಟ್ಟಲ್ಲಿ, ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು;